ಚುಟುಕು ಕ್ರಿಕೆಟ್ ಬಂದರೆ ಶಾಸ್ತ್ರೀಯತೆ ಮುಕ್ಕಾದೀತು ಎಂದು ಚಂದ್ರು ಹೇಳಿದ್ದರಲ್ಲ ಎಂದುಕೊಂಡು ಈ ರಬಾಡಾ ಎಂಬ ಈ ಕಾಲದ ಪ್ರತಿಭೆಯ ಹೆಜ್ಜೆಗುರುತುಗಳನ್ನು ನೋಡಿದರೆ, ಬೇರೆಯದೇ ಸತ್ಯ ಎದ್ದುಕಾಣುತ್ತದೆ. 2015ರ ನವೆಂಬರ್‌ನಲ್ಲಿ ಭಾರತದ ಎದುರೇ ಮೊದಲ ಟೆಸ್ಟ್ ಆಡಿದ ದಕ್ಷಿಣ ಆಫ್ರಿಕಾದ ಈ ಕಪ್ಪು ಹುಡುಗ ಇದುವರೆಗೆ 43 ಟೆಸ್ಟ್ ಪಂದ್ಯಗಳನ್ನು ಆಡಿದ್ದಾಗಿದೆ. 197 ವಿಕೆಟ್‌ಗಳು ಖಾತೆಯಲ್ಲಿವೆ. ಚಂದ್ರು ಹದಿನೈದು ವರ್ಷಗಳ ಸುದೀರ್ಘಾವಧಿ ಆಡಿ ಟೆಸ್ಟ್ ಕ್ರಿಕೆಟ್‌ನಲ್ಲಿ 15,963 ಎಸೆತಗಳನ್ನು ಹಾಕಿದ್ದರು. ರಬಾಡಾ ಈಗಾಗಲೇ 8,011 ಎಸೆತಗಳನ್ನು ಬೌಲ್ ಮಾಡಿದ್ದಾಗಿದೆ. ಏಕದಿನದ ಪಂದ್ಯಗಳಲ್ಲಿನ 3,842 ಎಸೆತಗಳನ್ನೂ ಸೇರಿಸಿಕೊಂಡರೆ ಪುಟ್ಟ ಅವಧಿಯಲ್ಲಿ ಕೈಕಾಲುಗಳು ಅದೆಷ್ಟು ದಣಿದಿರಬೇಡ?

ದಕ್ಷಿಣ ಆಫ್ರಿಕಾದ ವಾಣಿಜ್ಯ ರಾಜಧಾನಿ ಜೊಹಾನ್ಸ್‌ಬರ್ಗ್‌ನಲ್ಲಿ ಬೆಳೆದವರು ರಬಾಡಾ. ಅವರ ತಂದೆ ಎಂಫೊ ರಬಾಡಾ ವೈದ್ಯರು. ಅವರು ಕೊಳೆಗೇರಿಗಳಿಗೆ ಹೋಗಿ, ಬಡಬಗ್ಗರ ಆರೋಗ್ಯ ವಿಚಾರಿಸಿಕೊಂಡು, ಮಾತ್ರೆಗಳನ್ನೋ ಟಾನಿಕ್ ಅನ್ನೋ ಕೊಟ್ಟುಬರುತ್ತಿದ್ದರು. ಒಂಬತ್ತನೇ ಇಯತ್ತೆಯಲ್ಲಿ ಓದುತ್ತಿದ್ದಾಗಿನಿಂದಲೇ ರಬಾಡಾ ಕೂಡ ಅಪ್ಪನ ಜತೆಗೆ ಹೋಗುತ್ತಿದ್ದುದು ಮಾಮೂಲಾಗಿತ್ತು. ಅಲ್ಲಿನ ಜನರ ಬದುಕಿನ ದರ್ಶನ ಮಗನಿಗೆ ಆಗಲಿ ಎನ್ನುವುದು ಅವರ ಉದ್ದೇಶವಾಗಿತ್ತು. ರಬಾಡಾ, ತನ್ನ ಬಟ್ಟೆಗಳು, ಬೂಟುಗಳನ್ನು ಅಗತ್ಯವಿದ್ದವರಿಗೆ ಸ್ವಪ್ರೇರಣೆಯಿಂದ ಕೊಟ್ಟಿದ್ದು ಬೇರೆಯದೇ ನೀತಿ ಕಥೆ.

2014ರಲ್ಲಿ ನಡೆದ 19 ವರ್ಷದೊಳಗಿನವರ ಏಕದಿನ ವಿಶ್ವಕಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ದಕ್ಷಿಣ ಆಫ್ರಿಕಾ ಮಣಿಸಿತು. ಆ ಪಂದ್ಯದಲ್ಲಿ ಬರೀ 25 ರನ್ ನೀಡಿ ರಬಾಡಾ 6 ವಿಕೆಟ್‌ಗಳನ್ನು ಕಿತ್ತಿದ್ದರು. ಆಗಿನ್ನೂ 19ರ ಪ್ರಾಯ. ಗಂಟೆಗೆ 145 ಕಿ.ಮೀ ವೇಗದಲ್ಲಿ ಅದಾಗಲೇ ಎಸೆತಗಳನ್ನು ಹಾಕುತ್ತಿದ್ದ ಅವರು, ಎರಡೇ ವರ್ಷಗಳ ನಂತರ 'ಕ್ರಿಕೆಟ್ ಸೌತ್ ಆಫ್ರಿಕಾ'ದ ವಾರ್ಷಿಕ ಸಮಾರಂಭದ ಡಿನ್ನರ್ ಟೇಬಲ್ ಎದುರು ಕುಳಿತಿದ್ದರು.

ಟೆಸ್ಟ್ ಕ್ರಿಕೆಟ್‌ನ ಸಾಂಪ್ರದಾಯಿಕ ವರಸೆ, ಏಕದಿನದ ವೇಗ, ಚುಟುಕು ಕ್ರಿಕೆಟ್‌ನ ಪರಮ ವೇಗ ಈ ಮೂರಕ್ಕೂ ಒಗ್ಗಿಕೊಳ್ಳುತ್ತಲೇ ಎಲ್ಲಿಗಾದರೂ ತಾನು ಸೈ ಎನ್ನುವ ಸಂದೇಶವನ್ನು ಇಷ್ಟು ಚಿಕ್ಕಪ್ರಾಯದ ಹುಡುಗ ನೀಡಿದಾಗ, ಮತ್ತೆ ಚಂದ್ರು ಅವರೇ ಹದಿನೈದು ವರ್ಷಗಳ ಹಿಂದೆ ಹೊರಹಾಕಿದ್ದ ನಿಟ್ಟುಸಿರು ನೆನಪಾಗಿತ್ತು.

ರಬಾಡಾ 2018ರಲ್ಲಿ ವಾರ್ಷಿಕ ಸಮಾರಂಭದಲ್ಲಿ ಅಷ್ಟೊಂದು ಪ್ರಶಸ್ತಿಗಳನ್ನು ಸ್ವೀಕರಿಸಿದ ಮರು ತಿಂಗಳೇ ಟೆಸ್ಟ್ ಕ್ರಿಕೆಟ್‌ನಲ್ಲಿ 150 ವಿಕೆಟ್‌ಗಳನ್ನು ಖಾತೆಗೆ ಹಾಕಿಕೊಂಡರು. 23 ವರ್ಷ 50 ದಿನಗಳ ಹುಡುಗನೊಬ್ಬ ಮಾಡಿದ ಸಾಧನೆ ಅದು. ವಿಶ್ವದಲ್ಲೇ ಯಾರೂ ಅದುವರೆಗೆ ಇಷ್ಟು ಚಿಕ್ಕಪ್ರಾಯದಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 150 ವಿಕೆಟ್‌ಗಳನ್ನು ಪಡೆದಿರಲಿಲ್ಲ. 2018ರ ವರ್ಷ ಈ ಹುಡುಗ ಮುಟ್ಟಿದ್ದೆಲ್ಲ ಚಿನ್ನ. 'ವಿಸ್ಡನ್ ವರ್ಷದ ಕ್ರಿಕೆಟಿಗ' ಪ್ರಶಸ್ತಿ ಒಲಿದುಬಂದದ್ದೂ ಆಗಲೇ.

2015ರ ಜುಲೈ 10ರಂದು ದಕ್ಷಿಣ ಆಫ್ರಿಕಾದ ಈ ಕ್ರಿಕೆಟಿಗ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದು. ಎದುರಾಳಿ ಬಾಂಗ್ಲಾದೇಶ. ನಾಲ್ಕನೇ ಓವರ್‌ನಲ್ಲಿ ರಬಾಡಾ ಎರಡು ಶಾರ್ಟ್ ಬಾಲ್‌ಗಳನ್ನು ಹಾಕಿದರು. ಮೂರನೆಯದ್ದೂ ಹಾಗೆಯೇ ಬಂದೀತು ಎಂಬ ನಿರೀಕ್ಷೆಯಲ್ಲಿದ್ದ ಬಾಂಗ್ಲಾದ ಆರಂಭಿಕ ಬ್ಯಾಟ್ಸ್‌ಮನ್ ತಮೀಮ್ ಇಕ್ಬಾಲ್ ಅವರಿಗೆ ಅಚ್ಚರಿ. ರಬಾಡಾ ಫುಲ್ಲರ್ ಲೆಂಗ್ತ್ ಬಾಲ್ ಹಾಕಿದರು. ತಮೀಮ್ ಕಕ್ಕಾಬಿಕ್ಕಿ. ಮಧ್ಯದ ಹಾಗೂ ಆಫ್‌ಸ್ಟಂಪ್‌ನತ್ತ ಗುರಿ ಮಾಡಿದ್ದ ಆ ಎಸೆತ ವಿಕೆಟ್‌ಗಳನ್ನು ಎಗರಿಸಿತ್ತು. ಅದು ಪ್ರತಿಭಾವಂತ ವೇಗಿ ಅಂತರರಾಷ್ಟ್ರೀಯ




ಕ್ರಿಕೆಟ್‌ನಲ್ಲಿ ಪಡೆದ ಮೊದಲ ವಿಕೆಟ್. ಪ್ಯಾಡ್‌ನತ್ತ ಒಳನುಗ್ಗಿದ ಮರುಎಸೆತವನ್ನು ಲೀಟನ್ ದಾಸ್ ಮಿಡ್‌ವಿಕೆಟ್‌ನತ್ತ ಫ್ಲಿಕ್ ಮಾಡಿ ಕ್ಯಾಚಿತ್ತರು. ಹ್ಯಾಟ್ರಿಕ್ ಎಸೆತವನ್ನು ಬೌನ್ಸರ್ ಹಾಕಬೇಕೋ, ಯಾರ್ಕರ್ ಹಾಕಬೇಕೋ ಎಂಬ ಜಿಜ್ಞಾಸೆ ಹುಡುಗನಿಗೆ. ಎರಡನ್ನೂ ಬಿಟ್ಟು ಗುಡ್‌ಲೆಂಗ್ತ್ ಹಾಕಿದರು. ವೇಗವೇ ಈ ಸಲ ಫಲ ಕೊಟ್ಟಿತು. ಬೆರಳಿನ ಗಾಯದಿಂದ ಚೇತರಿಸಿಕೊಂಡು ಆಡಲು ಬಂದಿದ್ದ ಮಹಮದುಲ್ಲ ಪ್ಯಾಡ್‌ಗೆ ರೊಪ್ಪನೆ ಚೆಂಡು ಬಡಿಯಿತು. ಅಂಪೈರ್ ತೋರುಬೆರಳನ್ನು ಮೇಲೆತ್ತಿದರು. ತೈಜುಲ್ ಇಸ್ಲಾಂ ಬಿಟ್ಟರೆ ಬೇರೆ ಯಾರೂ ಚೊಚ್ಚಲ ಏಕದಿನ ಪಂದ್ಯದಲ್ಲಿ ಹ್ಯಾಟ್ರಿಕ್ ಗಳಿಸಿರಲಿಲ್ಲ. ರಬಾಡಾ ಅಂಥದೊಂದು ಸಾಧನೆಯ ರುಜು ಹಾಕಿದರು. ಬರೀ 16 ರನ್‌ಗಳಿಗೆ 6 ವಿಕೆಟ್ ಅನ್ನು ಮೊದಲ ಪಂದ್ಯದಲ್ಲೇ ಗಳಿಸಿದ್ದು ವಿಶೇಷ. ಏಕದಿನ ಪಂದ್ಯಗಳಲ್ಲಿ ಆಗ ವಿಶ್ವದಲ್ಲೇ ಬೌಲರ್ ಒಬ್ಬ ಮಾಡಿದ ಶ್ರೇಷ್ಠ ಸಾಧನೆ ಅದು.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ 2017ರಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ ಈ ಪ್ರತಿಭೆಯನ್ನು ಬುಟ್ಟಿಗೆ ಹಾಕಿಕೊಂಡಿತು. ಆ ವರ್ಷ ಕೇವಲ 128 ಎಸೆತಗಳನ್ನಷ್ಟೇ ಬೌಲ್ ಮಾಡುವ ಅವಕಾಶ ಸಿಕ್ಕಿದ್ದು. 6 ವಿಕೆಟ್‌ಗಳು ಸಂದವು. ಮರುವರ್ಷ ಇಂಗ್ಲೆಂಡ್‌ನಲ್ಲಿ ಕೌಂಟಿ ಕ್ರಿಕೆಟ್ ಆಡುವ ಆಯ್ಕೆಯನ್ನು ತನ್ನದಾಗಿಸಿಕೊಂಡದ್ದಕ್ಕೆ ದೆಹಲಿ ತಂಡವನ್ನು ಪ್ರತಿನಿಧಿಸಲಿಲ್ಲ. ಆದರೂ ಕಳೆದ ವರ್ಷ ಡೆಲ್ಲಿ ಕ್ಯಾಪಿಟಲ್ಸ್ ರಬಾಡಾ ಅವರನ್ನು ಉಳಿಸಿಕೊಂಡಿತು. ರಬಾಡಾ 25 ವಿಕೆಟ್‌ಗಳನ್ನು ಪಡೆದು, 'ಕ್ರಿಕೆಟ್ ಯಾವುದಾದರೇನು, ವಿಕೆಟ್ ನವನವೀನ' ಎಂದು ನಕ್ಕಿದ್ದರು. ಈ ಸಲ ಮೊದಲ ಬೀಸಿನಲ್ಲೇ ಅವರ ಛಾಪು ಎದ್ದುಕಂಡಿದೆ.

ಕಳೆದ ಸಲವೂ ಒಂದು ಸೂಪರ್ ಓವರ್ ಮಾಡಿ ತಮ್ಮ ತಂಡವನ್ನು ಗೆಲ್ಲಿಸಿಕೊಟ್ಟಿದ್ದ ಅವರು ಈ ಬಾರಿ ಅಂತಹುದೇ ಇನ್ನೊಂದು ಅವಕಾಶವನ್ನು ಹಣ್ಣಾಗಿಸಿಕೊಂಡದ್ದು ಸೋಜಿಗ. ಭಾರತದ ಜಸ್‌ಪ್ರೀತ್ ಬೂಮ್ರಾ ಬಿಟ್ಟರೆ ಹೀಗೆ ಎರಡು ಸೂಪರ್ ಓವರ್‌ಗಳ ಸಂಭ್ರಮಕ್ಕೆ ಸಾಕ್ಷಿಯಾಗುವ ಅವಕಾಶ ಇನ್ನೊಬ್ಬ ವೇಗದ ಬೌಲರ್‌ಗೆ ಸಿಕ್ಕಿರಲಿಲ್ಲ.

ಟೆಸ್ಟ್‌ನಲ್ಲಿ 197, ಏಕದಿನ ಪಂದ್ಯಗಳಲ್ಲಿ 117, ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 29 ವಿಕೆಟ್‌ಗಳನ್ನು ಪಡೆದಿರುವ ರಬಾಡಾ, ಜೋರಾಗಿ ಮಳೆಯಾಗುತ್ತಿರುವ ಈ ಕಾಲದಲ್ಲಿ ಕ್ರಿಕೆಟ್ ಬದಲಾವಣೆ ಕುರಿತ ಹಲವು 'ಮಿಥ್'ಗಳನ್ನು ಒಡೆಯುತ್ತಿರುವುದಂತೂ ಸ್ಪಷ್ಟ. ಬಿ.ಎಸ್. ಚಂದ್ರಶೇಖರ್ ಅಭಿಪ್ರಾಯವೀಗ ಎಷ್ಟರ ಮಟ್ಟಿಗೆ ಬದಲಾಗಿದೆಯೋ ಎನ್ನುವುದು ಕುತೂಹಲ.